Wrong Reporting of the Procedings by the Press

ಶ್ರೀ ಎಚ್. ಡಿ. ದೇವೇಗೌಡ.—ನಾನು ಒಂದು ವಿವರಣೆಯನ್ನು ಕೊಡಬೇಕಾಗಿದೆ. ನಿನ್ನೆ ನಡೆದಂತಹ ಕಾರ್ಯಕಲಾಪಗಳು ಸರಿಯಾದ ರೀತಿಯಲ್ಲಿ ವರದಿಯಾಗಿಲ್ಲ. ಪತ್ರಿಕೆಗಳಲ್ಲಿ ತಪ್ಪು ವರದಿಯಾಗಿದೆ ಎನ್ನತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತಂದು ಸ್ವಲ್ಪ ವಿವರಣೆ ಕೊಡಬೇಕೆಂದಿದ್ದೇನೆ. ಪತ್ರಿಕೆಯಲ್ಲಿ ಬಂದಿರುವುದು ಈ ರೀತಿ ಇದೆ. ನನಗೆ ಮೂವರು ಹೆಣ್ಣುಮಕ್ಕಳು, ಮೊದಲನೆಯವಳಿಗೆ ಎರಡನೆಯವಳಿಗೆ ಲಗ್ನ ಆಗಿದೆ. ಮುದುವೆ ಆದವರು ನಮ್ಮ ಮನೆಯವರಲ್ಲ ಎಂದು ನೀವು ಒಪ್ಪುತ್ತೀರಿ, ಎಂದು ಮುಖ್ಯ ಮಂತ್ರಿಗಳು ತಿಳಿಸಿ, ನನ್ನ ಎರಡನೆಯ ಅಳಿಯನಿಗೆ ನೀಡಿದ್ದ ನಿವೇಶನ ಹಿಂದಿರುಗಿಸಿದ್ದಾರೆ. ಮೊದಲನೆಯ ಅಳಿಯನಿಗೆ ಕೊಟ್ಟ ನಿವೇಶನವನ್ನೇ ಇಬ್ಬರೂ ಹಂಚಿಕೊಳ್ಳಲು ತಿಳಿಸಲಾಗಿತ್ತು. ಆದರೆ ಸಿ.ಐ.ಟಿ.ಬಿ. ನಿಯಮದ ಪ್ರಕಾರ ಆ ರೀತಿ ಹಂಚಿಕೊಳ್ಳುವ ಹಾಗಿಲ್ಲ. ಎರಡನೇ ಅಳಿಯಂದಿರಿಗೆ ಆ ನಿವೇಶನವನ್ನೇ ಕೊಡಲಾಗಿದೆ ಅಷ್ಟೆ ಎಂದು ವರದಿಯಾಗಿದೆ.

Sri S. M. SHEERNALLY CHANDRASHEKAR.—I rise to a point of order. When the Leader of the House is not present how can the hon. Leader of Opposition rise a subject referring to a statement made by the Leader of the House?

ಅಧ್ಯಕ್ಷರು.—ಪತ್ರಿಕೆಯಲ್ಲಿ ತಪ್ಪಾಗಿ ವರದಿಯಾಗಿದೆ. ಅದನ್ನು ನಾನು ಹೇಳುತ್ತೇನೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ —ನಾನು ನನ್ನ ಆಪಾದನೆಯಲ್ಲಿ ಹೇಳಿರತಕ್ಕದ್ದು ಅವರ ಅಳಿಯಂದಿರ ಕುಟುಂಬ ಎಂದು ಹೇಳಿದ್ದೇನೆ. ಹೆಣ್ಣುಮಕ್ಕಳ ಹೆಸರನ್ನು ಹೇಳಲಿಲ್ಲ. Because I don't want to expose the name of the daughter. ಅಳಿಯ ಡಾ. ನಟರಾಜ್ ಅವರ ಕುಟುಂಬ ಎಂದು ಹತ್ತು ಸಾರಿ ಹೇಳಿದ್ದೇನೆ. ಡಾ. ನಟರಾಜ್ ಅವರ ಕುಟುಂಬದವರಿಗೆ ಕೊಟ್ಟರುವ ಸೈಟು ಎಂದು ಹೇಳಿದ್ದೇನೆ. ಅಳಿಯಂದಿರಿಗೆ ಸೈಟು ನೀಡಿರುವುದಾಗಿ ಹೇಳಲಿಲ್ಲ. ನಿನ್ನೆ ನಡೆದ ಕಾರ್ಯಕಲಾಪಗಳನ್ನು ಅಧ್ಯಕ್ಷರು ತರಿಸಿಕೊಂಡು ಪರಿಶೀಲನೆ ಮಾಡಬಹುದು. ಬೇರೆ ಬೇರೆ ವಿಲಾಸದಲ್ಲಿ 30-11-1973 ರಲ್ಲಿ 70′ × 70′ ವಿಸ್ತೀರ್ಣದ ಒಂದು ಸೈಟು. ಆ ಮೇಲೆ 28-10-1974 ರಲ್ಲಿ 130′ × 85′ ಅಳತೆಯುಳ್ಳ ಒಂದು ಸೈಟನ್ನು ನೀಡಲಾಗಿದೆ. ಒಂದು ಸೈಟನ್ನು ಶ್ರೀಮತಿ ನಾಗರತ್ನ ಅವರ ಹೆಸರಿಗೆ, ಕೇರ್ ಆಫ್ ಡಾ. ನಟರಾಜ್ ಎಂತಲೂ ಇನ್ನೊಂದು ಸೈಟನ್ನು ವೈಫ್ ಆಫ್ ಡಾ. ನಟರಾಜ್ ಎಂತಲೂ ಕೊಡಲಾಗಿದೆ ಎಂದು ಇಷ್ಟನ್ನು ಹೇಳಿದ್ದೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅಧ್ಯಕ್ಷರೇ ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಸಭಾನಾಯಕರು ಈ ಸಭೆಯಲ್ಲಿ ಇಲ್ಲದೇ ಇರುವಾಗ ವಿರೋಧ ಪಕ್ಷದ ನಾಯಕರು ಈ ವಿಷಯವನ್ನು ಎತ್ತಬಹುದೇ ?

ಅಧ್ಯಕ್ಷರು.—ಶ್ರೀಮಾನ್ ದೇವೇಗೌಡರು ಸ್ಪಷ್ಟೀಕರಣ ಮಾಡಿಕೊಳ್ಳುತ್ತಿದ್ದಾರೆ. ಅವರೇನೂ ಆರೋಪಣೆ ಮಾಡುತ್ತಿಲ್ಲ. ತಮ್ಮ ಭಾಷಣ ತಪ್ಪಾಗಿದೆ ಎಂದು ಕ್ಲಾರಿಫೈ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಲೀಡರ್ ಈ ಸಭೆಯಲ್ಲಿ ಇರಬೇಕು ಎಂದೇನೂ ಇಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಅಳಿಯಂದಿರಿಗೆ ಸೈಟು ಕೊಟ್ಟಿದ್ದಾರೆ ಎಂದು ನಾನು ಹೇಳಲಿಲ್ಲ. ಡಾ. ನಟರಾಜ್ ಅವರ ಕುಟುಂಬಕ್ಕೆ ಸೈಟು ಕೊಟ್ಟಿದ್ದಾರೆ ಎಂದು ನಾನು ಹೇಳಿದ್ದೇನೆ. ಕುಟುಂಬ ಎಂದರೆ ಹೆಂಡತಿ ಎಂದು ಆಗಬಹುದು. ನಾನು ಇದನ್ನು ಸ್ಪಷ್ಟೀಕರಣ ಮಾಡಿದ್ದೇನೆ.

ಇನ್ನೊಂದು ವಿಷಯವೇನೆಂದರೆ ದೇವೇಗೌಡರು ಮುಖ್ಯ ಮಂತ್ರಿಗಳ ವಿರುದ್ಧ ಆಪಾದನೆಗಳನ್ನು ಮಂಡಿಸಲು ಅವರು ಹಿಂದೆ ಮುಂದೆ ನೋಡಿದರು ಎನ್ನುವ ರೀತಿಯಲ್ಲಿ ತಪ್ಪು ಅರ್ಥ ಕಲ್ಪನೆಯಾಗುವ ರೀತಿಯಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅದು ಸರಿಯಲ್ಲ. ಯಾವುದೇ ಚಾರ್ಜಸ್ ಇಲ್ಲದೆ ಊಹಾಪೆ ಮಾತುಗಳನ್ನಾಡಿದ್ದೇನೆ ಎಂಬ ಅರ್ಥ ಬರುತ್ತದೆ. ಅಧ್ಯಕ್ಷರು ಅನುಮತಿ ಕೊಟ್ಟಾಗ ಈ ಸಭೆಯ ಮುಂದೆ ಯಾವಾಗಬೇಕಾದರೂ ಆಪಾದನೆಗಳನ್ನು ಇಡಲು ನಾನು ಸಿದ್ಧನಾಗಿದ್ದೇನೆ. ನಾನು ನ್ಯಾಯಾಂಗ ವಿಚಾರಣೆಗೆ ಒತ್ತಾಯ ಪಡಿಸಿದ್ದು ನಿಜ. ಒಂದುವೇಳೆ ಅದಕ್ಕೆ ಒಪ್ಪದೇ ಹೋದರೆ ಈ ಸಭೆಯ ಸದಸ್ಯರ ಸಮಿತಿಯನ್ನು ಮಾಡಿ ಅವರು ವಿಚಾರಣೆ ಮಾಡಿದರೆ ಸಾಕು. ನಾನು ಆಪಾದನೆ ಪಟ್ಟಿಯನ್ನು ಮಾಡಿಕೊಂಡು ಬಂದಿದ್ದೇನೆ. ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟರೆ ಪ್ರತಿಯೊಂದು ಆಪಾದನೆಯನ್ನೂ ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಈಗ ಆಪಾದನೆಗಳನ್ನು ಸಭೆಯಮುಂದೆ ಇಡುವುದಕ್ಕೆ ಸಾಧ್ಯವಿಲ್ಲ. ಆಪಾದನೆಗಳನ್ನು ಇಡುವುದಕ್ಕೆ ಬೇಕಾದಷ್ಟು ಅವಕಾಶಗಳು ಇವೆ.

ಶ್ರೀ ಕೋಣಂದೂರು ಲಿಂಗಪ್ಪ.—ನಿನ್ನೆ ಮುಖ್ಯಮಂತ್ರಿಗಳು ಆಪಾದನೆಗಳನ್ನು ಸಭೆಯ ಮುಂದೆ ಇಡಿ ಎಂದು ಸಾರಿ ಸಾರಿ ಹೇಳಿದ್ದಾರೆ. ಆದ್ದರಿಂದ ಈ ಆಪಾದನೆಗಳ ಪಟ್ಟಿಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಇಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ನನ್ನ ವಿನಂತಿ.

ಅಧ್ಯಕ್ಷರು.—ನಿನ್ನೆಯ ದಿವಸ ಅವರು ಹಾಗೆ ಮಾಡಬಹುದಾಗಿತ್ತು. ಎಷ್ಟು ಹೇಳಿದರೂ ಕೇಳಲಿಲ್ಲ. ಅವರು ಅವನ್ನು ಈ ಸಭೆಯ ಮುಂದೆ ಇಡುವುದಕ್ಕೆ ಮುಂದೆ ಬೇಕಾದಷ್ಟು ಅವಕಾಶಗಳು ಇವೆ. ಆಗ ಅವರು ಅವುಗಳನ್ನು ಸಭೆಯ ಮುಂದೆ ಇಡಬಹುದು.

ಶ್ರೀ ಎಚ್. ಡಿ. ದೇವೇಗೌಡ.—ನಾನೇನೂ ಆಪಾದನೆಗಳನ್ನು ರಾತ್ರಿ ಸೃಷ್ಟಿ ಮಾಡಿಕೊಂಡು ಬಂದಿಲ್ಲ. ನನ್ನ ಬಂಡಲ್‌ನಲ್ಲಿ ಇದ್ದುದನ್ನು ತೆಗೆದುಕೊಂಡು ಬಂದಿದ್ದೇನೆ. ತಾವು ಅನುಮತಿ ಕೊಟ್ಟಾಗ ಅವುಗಳನ್ನು ಈ ಸಭೆಯ ಮುಂದೆ ಇಡುತ್ತೇನೆ. ಜುಡಿಷಿಯರ್ ಫ್ರೋಬ್ ಮಾಡಿದರೆ ಮುಖ್ಯ ಮಂತ್ರಿಗಳ ಮೇಲಿರುವ ಆಪಾದನೆಗಳನ್ನು ರುಜುವಾತು ಮಾಡುವುದಕ್ಕೆ ಹಿಂಜರಿಯುತ್ತೇನೆ ಎನ್ನುವ ಅನುಮಾನ ಬೇಡ. ಮತ್ತು ಈ ಸಭೆಯ ಸದಸ್ಯರ ಸಮಿತಿಯ ಮುಂದೆ ಇಡಲು ಸಿದ್ಧನಾಗಿದ್ದೇನೆ. ಈ ಸಭೆಗೆ ಆಪಾದನೆಗಳನ್ನು ಪರಿಶೀಲಿಸುವ ಅಧಿಕಾರವಿಲ್ಲ ಎಂದಲ್ಲ. ಅಧಿಕಾರ ಇದೆ. ಆಪಾದನೆಗಳನ್ನು ಇಡುವಾಗ ದಾಖಲೆಗಳನ್ನು ಪರಿಶೀಲಿಸಿ ಕೆಲವು ಅಗತ್ಯವಾದ ಎವಿಡೆನ್ಸ್ ತರಿಸಿ ಫೈಲುಗಳನ್ನು ಕಾಲ್‌ಫಾರ್ ಮಾಡಿ ಪರಿಶೀಲಿಸಲು ಈ ಸಭೆಗೆ ಅವಕಾಶ ಇಲ್ಲ.

ಅಧ್ಯಕ್ಷರು.—ನಿನ್ನೆ ಒಂದುಸಾರಿಯಲ್ಲ, ಹತ್ತು ಸಾರಿ ಮಾನ್ಯ ಮುಖ್ಯಮಂತ್ರಿಗಳು ನೀವು ಆಪಾದನೆಗಳು ಏನಿದೆಯೋ ಅವನ್ನು ಈ ಸಭೆಯ ಮುಂದೆ ಇಡಿ ಎಂಬುದಾಗಿ ಕೇಳಿದರು. ಮಾನ್ಯ ಶ್ರೀ ಪುಟ್ಟಸ್ವಾಮಿಯವರು, ಶ್ರೀ ಕೋಣಂದೂರು ಲಿಂಗಪ್ಪನವರು, ಶ್ರೀ ಬಿ. ವಿ. ಕಕ್ಕಿಲಾಯ ಅವರು ಮತ್ತು ಶ್ರೀ ಕಾಗೋಡು ತಿಮ್ಮಪ್ಪನವರೂ ಸಹ ಆವುಗಳನ್ನು ಈ ಸಭೆಯಮುಂದೆ ಇಡಬೇಕೆಂದರು. ನಿನ್ನೆಯೇ ಇಡಬಹುದಾಗಿತ್ತು. ಅದಕ್ಕೆ ಬದಲು ನುಮ್ಮನೆ ಪತ್ರಿಕೆಗಳಲ್ಲಿ ಈ ರೀತಿ ಬಂದಿದೆಯೆಂಬುದಾಗಿ ಹೋಲಿಕೆಮಾಡಿ ಇಲ್ಲಿ ಮಾತನಾಡುತ್ತಾ ಹೋದರೆ ನಮ್ಮ ಮನೆಸ್ಥಿಗೆ ಬಹಳವಾಗಿ ನೋವಾಗುತ್ತದೆ. ಇವತ್ತು ಆ ಆಪಾದನೆಗಳ ಬಗ್ಗೆ ಮಾತನಾಡಲು ಅವಕಾಶ, ಅನುಮತಿ ಕೊಡಿ ಎಂಬುದಾಗಿ ಕೇಳುತ್ತಿದ್ದೀರಿ. ಈಗಾಗಲೇ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗುತ್ತಿದೆ ಮುಂದೆ ಸಾಮಾನ್ಯ ಆಡಳಿತ ಮತ್ತು ಆಯವ್ಯಯದ ಮೇಲೆ ತಾವು ಇನ್ನೂ ಚರ್ಚೆಮಾಡುವುದಿದೆ. ಆ ಸಂದರ್ಭಗಳನ್ನು ಉಪಯೋಗಿಸಿಕೊಂಡು ತಾವು ಆವರ ಮೇಲೆ ಹೇರತಕ್ಕ ಆಪಾದನೆಗಳನ್ನು ಈ ಸಭೆಯ ಮುಂದೆ ಇಡಬಹುದು. ಅದಕ್ಕೆ ಹೆಚ್ಚಿನ ಅವಕಾಶವಿವೆ. ಆ ಆಪಾದನೆಗಳು ಸರಿಯಿದ್ದರೆ ಆವುಗಳ ಮೇಲೆ ಸಭೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬಹುದು. ಇಲ್ಲದಿದ್ದರೆ ಅವನ್ನು ಯಾರೂ ಒಪ್ಪುವುದಿಲ್ಲ. ಈ ಸಭೆಯಲ್ಲಿ ಅವರು ಆಪಾದನೆಗಳನ್ನು ಇಟ್ಟಮೇಲೆ ನಾವು ಅದರ ಬಗ್ಗೆ ಕೂಲಂಕಷವಾಗಿ ವಿಚಾರಮಾಡಿ ಉತ್ತರ ಕೊಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಾರೆ. ನಮ್ಮ ಪಾರ್ಟಿ ಮೆಂಬರುಗಳನ್ನು ಆಗ ನುಮ್ಮನೆ ಬಿಡುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಅಂದಮೇಲೆ ಆಪಾದನೆಗಳನ್ನು ಈ ಸಭೆಯಮುಂದೆ ಇಡದೆ ಪತ್ರಿಕೆಯಲ್ಲಿ ಬಂದ ವಿಷಯಗಳನ್ನು ಕುರಿತು ಇಲ್ಲಿ ಮಾತನಾಡುತ್ತಾ ಹೋದರೆ ಹೇಗೆ? ನಾನು ಮೊದಲೇ ಹೇಳಿದಹಾಗೆ ತಮಗೆ ಅವರ ಮೇಲೆ ಚಾರ್ಜಸ್ ಫ್ರೇಂ ಮಾಡಬೇಕಾದರೆ ಬೇಕಾದಷ್ಟು ಅವಕಾಶಗಳಿವೆ.

Sri H. D. DEVE GOWDA.—This is a thing that is in practice. Whatever charges I am going to spell out after I am permitted by the Chair either today or tomorrow or the day-after, those charges will have to be looked into either by a Committee of this House or a Judicial Authority, and I am prepared to place those charges.